ಉಪಾಧ್ಯಕ್ಷರು:- ಈಗ ಎರಡು ಗಂಟೆಯಾಗಿದೆ ತಾವು ಸ್ವಲ್ಪ ಬೇಗ ಸಂಕ್ಷಿಪ್ತವಾಗಿ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ನಂತರ ಪ್ರಸ್ತಾಪ ಮಾಡಿ ಎಂದರೆ ಮಾಡುತ್ತೇನೆ.

ಉಪಾಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ ಪುನಃ ಮೂರು ಗಂಟೆಗೆ ಸೇರುವುದು.

(ಸಭೆಯು 1-56ಕ್ಕೆ ಮುಕ್ತಾಯವಾಗಿ ಮತ್ತೆ 3 ಗಂಟೆಗೆ ಪುನರ್‌ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(ಸಭೆಯು ಮಧ್ಯಾಹ್ನ 3.10 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರ ಪೀಠವನ್ನು ಮಾನ್ಯ ಉಪಾಧ್ಯಕ್ಷರು ಅಲಂಕರಿಸಿದರು)

೫೫) ಐ.ಸಿ.ಡಿ.ಎಸ್. ಯೋಜನೆಯಲ್ಲಿ ಕಳಪೆ ಗುಣಮಟ್ಟದ ಎಣ್ಣೆಯ ಸರಬರಾಜು.

+ ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಜರೂರಾಗಿರತಕ್ಕಂತಹ ಮತ್ತು ಬಹಳ ಭಯಾನಕವಾದಂತಹ ಒಂದು ಸಂಗತಿಯನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಯನ್ನು ಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಈ ಐ.ಸಿ.ಡಿ.ಎಸ್. ಯೋಜನೆಯಲ್ಲಿ ಅಂಗನವಾಡಿಗಳು ಎಂದು ತೆರೆದಿದ್ದಾರೆ. ಅಂಗನವಾಡಿಗಳಲ್ಲಿ ಗರ್ಭಿಣಿ ಸ್ತ್ರೀಯರಿಗೆ ಮತ್ತು ಜೀರೋದಿಂದ 5 ವರ್ಷದ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡತಕ್ಕಂತಹ ಒಂದು ಯೋಜನೆ ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಇದಕ್ಕೆ ಅಪಾರವಾದಂತಹ ಹಣವನ್ನು ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ವಿನಿಯೋಗವಾಗುತ್ತಿದೆ. ಇದನ್ನು ಉಪಯೋಗಿಸಿಕೊಂಡು ಅನೇಕರು ಈ ಒಂದು ಗರ್ಭಿಣಿಯವರಿಗೆ ಮತ್ತು ಮಕ್ಕಳಿಗೆ ಕೊಡತಕ್ಕಂತಹ ಪೌಷ್ಟಿಕ ಆಹಾರವನ್ನು ಕೊಟ್ಟು ಮಕ್ಕಳನ್ನು ಮತ್ತು ಗರ್ಭಿಣಿ ಮಹಿಳೆಯರನ್ನು ಏನು ಸಲುಹಬೇಕಾಗಿತ್ತು, ಇದಕ್ಕೆ ಬದಲಾಗಿ ವಿಷವನ್ನು ತಿನ್ನಿಸತಕ್ಕಂತಹ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಈ ಆಹಾರದಲ್ಲಿ ಕಲಬೆರಕೆಯನ್ನು ಮಾಡಿ, ಇದರಲ್ಲಿಯೂ ಕೂಡ ಗಂಟು ಹೊಡೆಯತಕ್ಕಂತಹ, ದುಡಿಮೆಯನ್ನು ಮಾಡತಕ್ಕಂತಹ, ಅಯೋಗ್ಯ ಜನ, ಭ್ರಷ್ಟ ಅಧಿಕಾರಿಗಳು, ಗುತ್ತಿಗೆದಾರರು ಸೇರಿಕೊಂಡು ಈ ಆಹಾರವನ್ನು ಪೂರೈಸಿ ನಮ್ಮ ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರನ್ನು ಕೊಲೆ ಮಾಡತಕ್ಕಂತಹ ಒಂದು ವ್ಯವಸ್ಥಿತವಾದಂತಹ ಒಂದು ತಂತ್ರಗಾರಿಕೆಯನ್ನು ಉಪಯೋಗಿಸುತ್ತಿದ್ದಾರೆ. ಈ ರೀತಿಯಾಗಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿದೆ. ಇದರ ಬಗ್ಗೆ ನಿನ್ನೆ ಮತ್ತು ಮೊನ್ನೆ ಪ್ರಜಾವಾಣಿ ಪತ್ರಿಕೆಯ ಸಂಪಾದಕೀಯದಲ್ಲಿ ಆಗ್ರ ಲೇಖನಗಳು ಕೂಡ ಆದರಲ್ಲಿ ಬಂದಿದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳಿಗೆ ಪೂರೈಸಿರತಕ್ಕಂತಹ ಆಯಿಲ್ ಏನಿದೆ, ಎಡಿಬಲ್ ಆಯಿಲ್, ಇದರ ಸ್ಯಾಂಪಲ್‌ನ್ನು ತೆಗೆದುಕೊಂಡು ಬಂದು ಬೆಂಗಳೂರಿನ ಮಹಾನಗರಪಾಲಿಕೆಯ ಲ್ಯಾಬ್‌ನಲ್ಲಿ ಟೆಸ್ಟ್ ಮಾಡಿದಾಗ, ಇದು ಕಳಪೆ ಗುಣಮಟ್ಟದ್ದು ಮಾತ್ರ ಅಲ್ಲ, ಇದು ಕಲಬೆರಕೆ, ಇದನ್ನು ಮನುಷ್ಯರು ತಿನ್ನುವುದಕ್ಕೇ, ಮನುಷ್ಯನ ಉಪಯೋಗಕ್ಕೆ ಅನರ್ಹವೆಂದು ಬೆಂಗಳೂರು ನಗರಪಾಲಿಕೆಯ ಚೀಫ್ ಕೆಮಿಸ್ಟ್ ಅನಾಲಿಸಿಸ್‌ನವರು ಹೇಳಿದ್ದಾರೆ. ಇದರ ಆಧಾರದ ಮೇಲೆ ಸಹಾಯಕ ನಿರ್ದೇಶಕರಿಗೆ ಇಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ

ಇಲಾಖೆಯ ನಿರ್ದೇಶಕರೊಬ್ಬರು ಹೀಗೆ ಕಳಪೆ ಗುಣಮಟ್ಟ ಮತ್ತು ಕಲಬೆರಕೆ ಆಯಿಲ್‌ನ್ನು ಪೂರೈಸಿದ್ದೀರಿ ಎಂದು ಪತ್ರವನ್ನು ಬರೆಯುತ್ತಿದ್ದಾರೆ. ಸಾವಿರಾರು ಮಕ್ಕಳು ಇದನ್ನು ಈಗಾಗಲೇ ಉಪಯೋಗಿಸಿ ಆಗಿದೆ. ಗರ್ಭಿಣಿ ಸ್ತ್ರೀಯರು ಸಹ ಇದನ್ನು ಉಪಯೋಗಿಸಿದ್ದಾರೆ. ಅವರ ಆರೋಗ್ಯದ ಮೇಲೆ ಇದು ಏನು ಪರಿಣಾಮವನ್ನು ಬೀರಿದೆ? ಇನ್ನೊಂದು ಬಹಳ ಭಯಾನಕವಾಗಿರುವಂಥದ್ದು ಎಂದರೆ, ಇಲ್ಲಿ ಕೊಂಡಿರತಕ್ಕಂತಹ ಆಹಾರ ಪದಾರ್ಥಗಳು ಕೂಡ ಅತ್ಯಂತ ದುಬಾರಿಯ ಬೆಲೆಗೆ ಕೊಂಡು ಕೊಳ್ಳುತ್ತಿದ್ದಾರೆ. ಒಂದು ಉದಾಹರಣೆಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ಇದೇ ಆಯಿಲ್ ಒಂದು ಕೆ.ಜಿ.ಗೆ 32 ರೂಪಾಯಿಗಳು, ಈ ಬೆಲೆಗೆ ಶೇಂಗ ಎಣ್ಣೆ ಮಾರುಕಟ್ಟೆಯಲ್ಲಿ ದೊರೆಯುತ್ತಿದೆ. ಇವರು ಒಂದು ಕೆ.ಜಿ. ಯನ್ನು 46ರೂಪಾಯಿಗಳಿಗೆ ಕೊಂಡುಕೊಂಡಿರುವ ಹಾಗೆ ಎರಡು ಬಿಲ್‌ನ್ನು ಹಾಕಿದ್ದಾರೆ. ಒಂದು ಅಲಾಟ್‌ಮೆಂಟ್ ಎಂದು ಹೇಳಿದರೆ ನಮ್ಮ ಜಿಲ್ಲೆಯಲ್ಲಿ 1,750 ಕೆ.ಜಿ. ಎಣ್ಣೆಯನ್ನೇ ಕೊಂಡುಕೊಳ್ಳುತ್ತಾರೆ. ಇದರ ವ್ಯತ್ಯಾಸದ ಹಣ ಎಷ್ಟು ಆಯಿತು ಎಂದು ತಾವೇ ಯೋಚನೆಯನ್ನು ಮಾಡಿ. ಈ ರೀತಿಯಾಗಿ ವ್ಯವಸ್ಥಿತವಾಗಿ ತೆಗೆದುಕೊಳ್ಳುತ್ತಿದ್ದಾರೆ. ಮತ್ತು ಆಹಾರ ಪದಾರ್ಥಗಳನ್ನು ಹೆಚ್ಚು ಬೆಲೆಗೆ ಕೊಟ್ಟು ಕೊಂಡುಕೊಂಡಿದ್ದಾರೆ. ಹಾಗೆ ಬೆಲೆ ಜಾಸ್ತಿ ಕೊಟ್ಟು ಕೊಂಡುಕೊಂಡಿರುವುದನ್ನು ಸಹ ಗುರುತಿಸಿದ್ದಾರೆ. ಮಾರುಕಟ್ಟೆ ಬೆಲೆಗೂ ಇವರು ಕೊಂಡಿರುವುದಕ್ಕೂ ಇರತಕ್ಕ ಬೆಲೆಯ ವ್ಯತ್ಯಾಸವನ್ನು ಗುರ್ತಿಸಿದ್ದಾರೆ. ನಾನಾದರೂ ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ಹುಳು ತಿಂದಿರತಕ್ಕ ಬೇಳೆಕಾಳುಗಳಿಗೆ ಬಹಳ ದೊಡ್ಡ ಗ್ರಾಹಕ ಎಂದರೆ ಈ ಅಂಗನವಾಡಿ ಸಂಸ್ಥೆಗಳು. ಕೇವಲ ನೆಪಮಾತ್ರಕ್ಕೆ ಒಂದು ಸಹಕಾರ ಸಂಘ. ಈ ಸಹಕಾರ ಸಂಘದಲ್ಲಿ ಇದೆಲ್ಲವನ್ನೂ ವ್ಯಾಪಾರ ಮಾಡುವುದಿಲ್ಲ. ಕೇವಲ ಬೆಲೆ ಹಾಕುವುದಕ್ಕಾಗಿ ಈ ಸಹಕಾರ ಸಂಘ ಮತ್ತು ಯಾರೋ ಒಬ್ಬ ಖಾಸಗಿ ವ್ಯಕ್ತಿ ಈ ಅಧಿಕಾರಿಗಳ ಜೊತೆಯಲ್ಲಿ ಸೇರಿಕೊಂಡು ಈ ಹುಳುಕು ಮತ್ತು ಕಲಬೆರಕೆ ಆಹಾರ ಪದಾರ್ಥಗಳನ್ನು ಕೊಂಡು ಪೂರೈಕೆ ಮಾಡುತ್ತಿದ್ದಾರೆ. ಅಂಗನವಾಡಿಗಳಲ್ಲಿ ಶಿಶುಗಳಿಗೆ ಮತ್ತು ಗರ್ಭಿಣಿ ಸ್ತ್ರೀಯರಿಗೆ ಕೊಡತಕ್ಕ ಈ ಆಹಾರ ಪದಾರ್ಥಗಳು ವಿಷಪೂರಿತವಾಗಿರುತ್ತವೆ. ಈ ವಿಚಾರವನ್ನು ತಾವು ತುಂಬಾ ಗಂಭೀರವಾಗಿ ಪರಿಗಣಿಸಬೇಕು. ಯಾವ ಅಧಿಕಾರಿ ಈ ಕಲಬೆರಕೆಯನ್ನು ಮಾಡಿದ್ದಾರೆ ಅವರನ್ನು ಪತ್ತೆ ಹಚ್ಚಿ ಜೈಲಿಗೆ ಕಳಿಸಬೇಕು. ಇಲ್ಲದಿದ್ದರೆ ನಮಗೆ, ನಿಮಗೆ ಯಾರಿಗೂ ಗೌರವ ಬರುವುದಿಲ್ಲ. ಈ ಆಹಾರವನ್ನು ತಿಂದಿರತಕ್ಕ ಆ ಮಕ್ಕಳ ಶಾಪಕ್ಕೆ ನಾವೆಲ್ಲರೂ ತುತ್ತಾಗಬೇಕಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಆಯನೂರು ಮಂಜುನಾಥ್:- ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಬೇಕಾಗಿದೆ. ಇದು ಆಗಿರತಕ್ಕದ್ದು ನನ್ನ ಕ್ಷೇತ್ರದಲ್ಲಿ. ಮಾನ್ಯ ಸಚಿವರು ಉತ್ತರ ಹೇಳುವುದಕ್ಕೆ ಮುಂಚೆ ಆ ಕ್ಷೇತ್ರದ ಶಾಸಕನಾಗಿ ಒಂದೆರಡು ಮಾತನ್ನು ಹೇಳ ಬಯಸುತ್ತೇನೆ.

ಉಪಾಧ್ಯಕ್ಷರು:- ಎಲ್ಲರೂ ಈ ರೀತಿ ಮಾತನಾಡುತ್ತಾ ಹೋದರೆ ಹೇಗೆ?

ಶ್ರೀ ಆಯನೂರು ಮಂಜುನಾಥ್:- ತಾವು ಅಷ್ಟು ದುಃಖಪಡುವುದಾದರೆ ನಾನು ಕೇಳುವುದೇ ಬೇಡ.

ಉಪಾಧ್ಯಕ್ಷರು:- ಯಾರೂ ಬೇಗ ಮುಗಿಸದಿದ್ದರೆ ನಾವು ಹೇಗೆ ಕೆಲಸಮಾಡಬೇಕು?

ಶ್ರೀ ಸಿ. ಬೈರೇಗೌಡ:- ಇನ್ನು ಮುಂದೆ ಜೀರೋ ಅವರ್‌ನ್ನು ಜೀರೋ ಡೇ ಎಂದು ಕರೆದರೆ ಒಳ್ಳೆಯದು.

ಶ್ರೀ ಆಯನೂರು ಮಂಜುನಾಥ್:- ಮಾನ್ಯ ಸದಸ್ಯರಾದ ಜ್ಞಾನೇಂದ್ರರವರು ಹೇಳಿದಂಥ ಅಂಶಗಳ ಜೊತೆಗೆ ಹೆಚ್ಚಿಗೆಯಾಗಿ ನಾನು ಎರಡು ಅಂಶಗಳನ್ನು ಸೇರಿಸಬಯಸುತ್ತೇನೆ. ಅವರು ತಂದು ಕೊಟ್ಟಂಥ ಆಯಿಲ್‌ನ ವರದಿ ಹೋಯಿತು. ಇದು ಕಲಬೆರಕೆಯಿಂದ ಕೂಡಿರುವುದರಿಂದ ಅದು ತಿನ್ನುವುದಕ್ಕೆ ಅಯೋಗ್ಯ ಎಂದು ಹೇಳಿದಂತಾಯಿತು. ಆದರೆ ಇದರ ಬಗ್ಗೆ ಏನು ಕ್ರಮ ತೆಗೆದು-ಕೊಂಡಿರಿ? ಆದರೆ ವಾಪಸು, ಎಚ್ಚರಿಕೆ.

ಉಪಾಧ್ಯಕ್ಷರು:- ಅವರು ಇನ್ನೂ ಉತ್ತರವನ್ನು ಹೇಳಿಲ್ಲ. ಉತ್ತರ ಹೇಳುವುದಕ್ಕೆ ಮೊದಲೇ ನೀವೇ ಹೇಳಿದರೆ ಹೇಗೆ?

ಶ್ರೀ ಆಯನೂರು ಮಂಜುನಾಥ್:- ಇದರ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ತೆಗೆದು ಕೊಳ್ಳಿ ಎಂದು ಡೈರೆಕ್ಟರ್‌ರವರು ಹೇಳಿಯೇ ಇಲ್ಲ. ಇದು ಮನುಷ್ಯರು ತಿನ್ನುವುದಕ್ಕೆ ಅಯೋಗ್ಯ-ವಾದುದು, ಇದರಲ್ಲಿ ಶೇಂಗಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆ ಎರಡನ್ನೂ ಬೆರೆಸಿದ್ದಾರೆ. ಇವೆರೆಡೂ ಎಣ್ಣೆಗಳನ್ನು ಮಿಶ್ರ ಮಾಡಿದಾಗ ಬೇರೆ ರೀತಿಯ ಕೆಮಿಕಲ್ ರೀ ಆಕ್ಷನ್ ಆಗುತ್ತದೆ. ಈ ಎಣ್ಣೆಗಳು ಬೇರೆ ಬೇರೆ ಆಗಿದ್ದಾಗ ಇವೆರಡೂ ಕೂಡ ತಿನ್ನುವುದಕ್ಕೆ ಯೋಗ್ಯ ಆದಂಥ ಎಣ್ಣೆಗಳು. ಆದರೆ ಎರಡನ್ನೂ ಬೆರೆಸಿದಾಗ ಅದರ ಪರಿಣಾಮ ಬೇರೆ ಆಗುತ್ತದೆ. ಡಿಸೆಂಬರ್‌ನಲ್ಲಿ ಇದನ್ನು ತೆಗೆದುಕೊಂಡು ಬಂದು ಲ್ಯಾಬೊರೇಟರಿಗೆ ಕಳುಹಿಸಿಕೊಟ್ಟಿದ್ದಾರೆ. ಮಾರ್ಚಿಯಲ್ಲಿ ಮತ್ತೆ ಅಲ್ಲಿನ ಅಸಿಸ್ಟೆಂಟ್ ಡೈರೆಕ್ಟರ್-ರವರು ಅಲ್ಲಿನ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಈಗ ಸರಬರಾಜು ಮಾಡಿರತಕ್ಕ ಮಾಲು ಕಳಪೆ ಮಟ್ಟದ್ದಾಗಿದೆ ಇದನ್ನು ಬದಲಾಯಿಸಿ ಎಂದು ಹೇಳುತ್ತಿದ್ದಾರೆ. ಇವರು ತರುತ್ತಿರುವಂಥ ಸೊಸೈಟಿ ಯಾವುದು ಎಂದರೆ ಒಬ್ಬ ಪ್ರಭಾವೀ ವ್ಯಕ್ತಿಯೊಬ್ಬರು ಅಧ್ಯಕ್ಷರಾಗಿರತಕ್ಕದ್ದು. ಆ ಸೊಸೈಟಿಯ ಮೂಲಕ ಇಂಥ ಕಳಪೆ ಮಾಲನ್ನು ಮಾರುತ್ತಿದ್ದಾರೆ. ಯಾರು ಇಂಥ ಕಳಪೆ ಮಾಲನ್ನು ಸರಬರಾಜು ಮಾಡಿದ್ದಾರೆ, ಮತ್ತು ಇದನ್ನು ತೆಗೆದುಕೊಂಡವರನ್ನು ಕೂಡಲೇ ಸಸ್ಪೆಂಡ್ ಮಾಡಿ. ಇದು ಸಣ್ಣ ಮಕ್ಕಳಿಗೆ ವಿಷವನ್ನು ಕೊಟ್ಟಿರುವಂಥ ಪ್ರಕರಣ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ವಿಮಲಾಬಾಯಿ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):- ಮಾನ್ಯ ಉಪ ಸಭಾಧ್ಯಕ್ಷರೆ, ಈಗಾಗಲೇ ದೂರು ಬಂದಿರುವುದರಿಂದ ಇನ್ನು ಒಂದು ವಾರದೊಳಗೆ ತನಿಖೆ ಮಾಡಿಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೆ, ತನಿಖೆಯಾದ ರಿಪೋರ್ಟ್ ತಮ್ಮ ಎದುರಿಗೆ ಇದೆ.

ಉಪಾಧ್ಯಕ್ಷರು:- ಅದನ್ನು ಅವರ ಕಡೆಗೆ ಕಳುಹಿಸಿಕೊಡಿ.

ಶ್ರೀ ಆಯನೂರು ಮಂಜುನಾಥ್:- ಇಲ್ಲಿ ಹೇಗೆಬೇಕೋ ಹಾಗೆ ಉತ್ತರವನ್ನು ಕೊಟ್ಟರೆ ಇನ್ನೇನು ತನಿಖೆ ಮಾಡಿಸುತ್ತೀರಿ?

ಉಪಾಧ್ಯಕ್ಷರು:- ಜೀರೋ ಅವರ್‌ನಲ್ಲಿ ಉತ್ತರ ಕೊಡುವುದಿಲ್ಲ. ತಾವು ಕೂತುಕೊಳ್ಳಿ. ನಿರ್ದಿಷ್ಟವಾಗಿ ಹೇಳಿ.

ಒಬ್ಬ ಮಾನ್ಯ ಸದಸ್ಯರು:- ತಪ್ಪು ಮಾಡಿದವರ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿ ಅರೆಸ್ಟ್ ಮಾಡಬೇಕು.

ಶ್ರೀ ಆಯನೂರು ಮಂಜುನಾಥ್:- ಅಲ್ಲಿ ಮಕ್ಕಳು ಸತ್ತಿದ್ದರೆ ಎಷ್ಟು ಗಂಭೀರವಾದ ಪರಿಣಾಮ ವಾಗುತ್ತಿತ್ತು ಎಂಬುದನ್ನು ಯೋಚನೆ ಮಾಡಿದ್ದೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವೆಯವರು ಒಂದು ವಾರ-ದೊಳಗೆ ಸಂಬಂಧಪಟ್ಟ ಅಕ್ರಮದ ಬಗ್ಗೆ ತನಿಖೆಯನ್ನು ನಡೆಸುವುದು ಮಾತ್ರವಲ್ಲ, ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ನಾವೂ ಕೂಡ ಹೇಳುತ್ತೇವೆ. ಇಂಥ ಪ್ರಕರಣಗಳು ಅನೇಕ ಕಡೆ ನಡೆದಿವೆ. ನಮ್ಮ ಗಮನಕ್ಕೂ ಕೂಡ ಬಂದಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಅತ್ಯಂತ ಪ್ರಾಮಾಣಿಕವಾಗಿ ತೆಗೆದುಕೊಳ್ಳುತ್ತೇನೆಂದು ಅವರು ಹೇಳಿದ್ದಾರೆ.

ವಿಷಯ:- (ಎ) ತೋಟಗಾರಿಕೆ ಇಲಾಖೆಯವರು ರೈತರಿಗೆ ಸಬ್ಸಿಡಿ ರೂಪದಲ್ಲಿ ಮೈಲು ತುತ್ತವನ್ನು ವಿತರಣೆ ಮಾಡುವ ತೂಕದಲ್ಲಿ ಅವ್ಯವಹಾರ.

+ ಶ್ರೀ ಡಿ.ವಿ. ಸದಾನಂದ ಗೌಡ:- ಮಾನ್ಯ ಉಪಾಧ್ಯಕ್ಷರೆ, ಇದುವರೆಗೆ ಅರಗ ಜ್ಞಾನೇಂದ್ರ ರವರು, ಆಯನೂರು ಮಂಜುನಾಥ್‌ರವರು ಪ್ರಸ್ತಾಪ ಮಾಡಿದ್ದಾರೆ ಇದಕ್ಕಿಂತಲೂ ಬಹಳ ಗಂಭೀರ-ವಾದ ಅವ್ಯವಹಾರ ತೋಟಗಾರಿಕೆ ಇಲಾಖೆಯಲ್ಲಿ ನಡೆಯುತ್ತಿದೆ. ರಾಜ್ಯ ಸರ್ಕಾರಕ್ಕೆ ಮತ್ತು ರಾಜ್ಯದ ರೈತರಿಗೆ ಮೋಸಮಾಡುವಂಥ ಒಂದು ದೊಡ್ಡ ಜಾಲವೊಂದು ತೋಟಗಾರಿಕಾ ಇಲಾಖೆಯಲ್ಲಿ ನಡೆಯುತ್ತಿದೆ. ರೈತರಿಗೆ ಸಬ್ಸಿಡಿ ರೂಪದಲ್ಲಿ ಮೈಲು ತುತ್ತವನ್ನು ನೀವು ವಿತರಣೆ ಮಾಡುತ್ತೀರಿ ಇದರಲ್ಲಿ ತೂಕದಲ್ಲಿ ಮೋಸಮಾಡುವಂಥ ಗಂಭೀರ ಕೆಲಸ ನಡೆಯುತ್ತಿದೆ. ಯಾರೋ ಕೆಲವು ಗುತ್ತಿಗೆದಾರರ ಕೈಯಿಂದ ಸರಬರಾಜುದಾರರು, ಇವರ ಜೊತೆಯಲ್ಲಿ ಜಿಲ್ಲಾ ಪಂಚಾಯಿತಿನವರೆಲ್ಲರೂ ಶಾಮೀಲಾಗಿ ತೂಕದಲ್ಲಿ ತುಂಬಾ ವ್ಯತ್ಯಾಸ ಮಾಡುತ್ತಿದ್ದಾರೆ. ತಮಗೆ ಉದಾಹರಣೆಗೆ ಹೇಳುವುದಾದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಅಪ್ಪು ಬ್ಯಾಂಡ್ ಎನ್ನುವವರು ಇದನ್ನು ಸರಬರಾಜು ಮಾಡುತ್ತಾರೆ. ಒಂದು ಗೋಣಿ ಚೀಲದಲ್ಲಿ 5 ಕೆ.ಜಿ. ಇರುವಂಥ 10 ಪ್ಯಾಕೆಟ್‌ಗಳು ಇರುತ್ತವೆ. ಪ್ರತಿಯೊಂದು 5 ಕೆ.ಜಿ.ಯ ಪ್ಯಾಕೆಟ್‌ನಲ್ಲೂ ಸುಮಾರು 300-400 ಗ್ರ್ಯಾಂನಷ್ಟು ಕಾಪರ್ ಸಲ್ಫೇಟ್ ಇರುವುದಿಲ್ಲ. ಅಂದರೆ 50